ಒ ಎಸ್ ನಂ.147/2014
ಪಿ ಡಬ್ಲ್ಯೂ - 4

ದಿನಾಂಕಃ 14-06-2018 ರಂದು ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಬಿ ಆರ್ ಆರ್ ವಕೀಲರಿಂದ**

ವಾದಿ ನನ್ನ ತಮ್ಮನ ಸೊಸೆ. ನಿಪಿ-1 ನ್ನು ಯಾವ ದಿನಾಂಕದಂದು ಮಾಡಿರುತ್ತಾರೆಂದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಿಪಿ-1 ರ ವ್ಯವಹಾರಕ್ಕೆ ಸೇರಿರುತ್ತೀರಾ ಎಂದರೆ ಸೇರಿರುತ್ತೇನೆ ಎನ್ನುತ್ತಾರೆ. ಸದರಿ ವ್ಯವಹಾರವೂ ಮಾಗಡಿಯ ತಾಲ್ಲೂಕು ಕಚೇರಿಯಲ್ಲಿ ಆಗಿರುತ್ತದೆ. ಅದಕ್ಕಿಂತ ಮೊದಲು ಯಾವುದೇ ವ್ಯವಹಾರ ಆಗಿರುವುದಿಲ್ಲ. ನಾವುಗಳು ಬೆಳಿಗ್ಗೆ ಸುಮಾರು 9-10 ಗಂಟೆಗೆ ತಾಲ್ಲೂಕು ಕಚೇರಿಗೆ ಹೋಗಿರುತ್ತೇವೆ.

ನಿಪಿ-1 ನ್ನು ಕಂಪ್ಯೂಟರ್ ನಲ್ಲಿ ಬರೆಸಲಾಗಿರುತ್ತದೆ. ಹನುಮಂತಯ್ಯ ಮತ್ತು ವೆಂಕಟರಾಮಯ್ಯ ಪತ್ರವನ್ನು ಬರೆಸಿಕೊಂಡು ಬಂದಿರುತ್ತಾರೆ. ನಿಪಿ-1 ನ್ನು ಬರೆಸುವಾಗ ನಾನು ಬಹಳ ದೂರದಲ್ಲಿದ್ದು ಅದರಲ್ಲಿ ಏನು ಬರೆದಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ ಎನ್ನುತ್ತಾರೆ. ನಿಪಿ-1 ಕ್ಕೆ ಸಹಿ ಮಾಡುವಾಗ ನಾನು ಪಿಡಬ್ಲ್ಯೂ-1 ರಿಂದ 3 ಹಾಗೂ ಹನುಮಂತಪ್ಪ ಮತ್ತು ಗಂಗಾಧರಪ್ಪ ಹಾಜರಿದ್ದರು ಎನ್ನುತ್ತಾರೆ. ನಿಪಿ-1 ಕ್ಕೆ ಪಿಡಬ್ಲ್ಯೂ-1 ರಿಂದ 3 ರವರು ಸಹಿ ಹಾಕುವುದನ್ನು ನಾನು ನೋಡಿರುತ್ತೇನೆ. ಅವರು ಇಂಗ್ಲೀಷ್ ನಲ್ಲಿ ಸಹಿ ಮಾಡಿರುತ್ತಾರೆ. ಪಿಡಬ್ಲ್ಯೂ-3 ರವರು ನಿಪಿ-1 ಕ್ಕೆ ಕನ್ನಡದಲ್ಲಿ ಸಹಿ ಮಾಡಿದ್ದು, ಅವರು ಆ ಸಹಿಯನ್ನು ಯಾವಾಗ ಮಾಡಿರುತ್ತಾರೆಂದರೆ ನನಗೆ ಗೊತ್ತಿರುವುದಿಲ್ಲ ಎನ್ನುತ್ತಾರೆ. 1 ನೇ ಪ್ರತಿವಾದಿ ಮತ್ತು ಅವರ ಗಂಡ ಗಂಗಾಧರಯ್ಯ ನಿಪಿ-1 ಕ್ಕೆ ಸಹಿ ಮಾಡುವುದನ್ನು ನಾನು

ನೋಡಿರುವುದಿಲ್ಲ. ನಿಪಿ-1 ರಲ್ಲಿ ಗಂಗಾಧರಯ್ಯ ಮತ್ತು ಗಂಗಮ್ಮ ಸಹಿ ಮಾಡಿರುತ್ತಾರೋ ಇಲ್ಲವೋ ನನಗೆ ಗೊತ್ತಿರುವುದಿಲ್ಲ.

ಕರಾರಿನ ಮುಂಗಡ ಹಣವನ್ನು ಕೊಡುವಾಗ ನಾನು ಹಾಜರಿದ್ದೇನು ಎನ್ನುತ್ತಾರೆ. ವೆಂಕಟರಾಮಯ್ಯ ಗಂಗಾಧರಯ್ಯನಿಗೆ ಹಣವನ್ನು ಕೊಟ್ಟಿರುತ್ತಾರೆ. ದಾವಾ ಆಸ್ತಿಯು 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ದಾವಾ ಸ್ವತ್ತಿನ ಮೂಲ ಮಾಲೀಕರು ಯಾರು ಎಂದರೆ ಗಂಗಾಧರಯ್ಯ ಎನ್ನುತ್ತಾರೆ. 500, 1000 ಮುಖಬೆಲೆಯುಳ್ಳ ಹಣವನ್ನು ಮುಂಗಡವಾಗಿ ನೀಡಿರುತ್ತಾರೆ. ನಿಪಿ-1 ರಲ್ಲಿ ಕಂಪ್ಯೂಟರ್ ಹಾಗೂ ಕೈಯಲ್ಲಿ ಬರೆದ ಬರವಣಿಗೆ ಇದ್ದು ನಾನು ಸಹಿ ಮಾಡುವಾಗ ಆ ಎರಡೂ ಬರವಣಿಗೆಗಳು ಇದ್ದವಾ ಎಂದರೆ ಇದ್ದವು ಎನ್ನುತ್ತಾರೆ.

ನಿಪಿ-1 ನ್ನು ಹನುಮಂತಪ್ಪ ಬರೆದಿರುತ್ತಾರೆ. ನಿಪಿ-1 ಕ್ಕ ಹನುಮಂತಪ್ಪ ಸಹಿ ಮಾಡಿರುತ್ತಾರೋ ಇಲ್ಲವೋ ನನಗೆ ಗೊತ್ತಿರುವುದಿಲ್ಲ ಎನ್ನುತ್ತಾರೆ. ದಾವಾ ಆಸ್ತಿಯ ಒಟ್ಟು ವಿಸ್ತೀರ್ಣ 40 X 60 ಎನ್ನುತ್ತಾರೆ. ಅದರ ಚೆಕ್ಕುಬಂದಿ ನನಗೆ ಗೊತ್ತಿರುವುದಿಲ್ಲ. ನಿಪಿ-1 ನ್ನು ಕರಾರು ಆದ ದಿನವೇ ನೊಂದಣಿ ಮಾಡಿಸಿಕೊಳ್ಳಲು ತೊಂದರೆ ಇತ್ತಾ ಎಂದರೆ ಹಣಕಾಸು ಮತ್ತು ದಾಖಲಾತಿಗಳನ್ನು ಹೊಂದಿಸಿಕೊಳ್ಳುವ ಕಾರಣ ನೊಂದಣಿಯನ್ನು ಮುಂದೂಡಲಾಯಿತು ಎನ್ನುತ್ತಾರೆ. ದಾವಾ ಆಸ್ತಿಯು ಸರ್ವೆ ನಂಬರ್ ನಲ್ಲಿ ಬರುತ್ತದಯಾ ಅಥವಾ ಪಂಚಾಯತಿಯ ವ್ಯಾಪ್ತಿಗೆ ಬರುತ್ತದೆಯಾ ಎಂದರೆ ಸರ್ವೆ ನಂಬರ್ ಗೆ ಬರುತ್ತದೆ ಎನ್ನುತ್ತಾರೆ.

ನಿಪಿ-1 ರಲ್ಲಿ ದಾವಾ ಸ್ವತ್ತನ್ನು ಸರ್ವೆ ನಂಬರ್ ಅಥವಾ ಖಾತಾ ನಂಬರ್ ಯಾವುದರಲ್ಲಿ ನಮೂದು ಮಾಡಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ದಿಯ ಗಂಡನಿಗೆ ಅವರ ತಂದೆ ಮನೆಯಲ್ಲಿ ವಾಸಮಾಡಲು ಅವಕಾಶ ಕೊಟ್ಟಿರಲಿಲ್ಲ ಎಂದರೆ ಯಾವುದೇ ಮನೆ ಇರಲಿಲ್ಲ ಎನ್ನುತ್ತಾರೆ. ಆ ಕಾರಣದಿಂದ ವಾದಿ 1ನೇ ಪ್ರತಿವಾದಿಯೊಂದಿಗೆ ಮನವಿ ಮಾಡಿಕೊಂಡು ದಾವಾ ಆಸ್ತಿಯಲ್ಲಿ ಸ್ವಲ್ಪ ದಿನ ಇರಲು ಅವಕಾಶ ಮಾಡಿಕೊಂಡಿರುತ್ತಾರೆಂದರೆ ಸರಿಯಲ್ಲ. ಖರೀದಿಸಿರುತ್ತಾರೆ ಎನ್ನುತ್ತಾರೆ.

ನಿಪಿ-1 ನ್ನು ಗಂಗಾಧರಪ್ಪ ಮತ್ತು 1ನೇ ಪ್ರತಿವಾದಿಯು ಸಹಿ ಮಾಡಿಲ್ಲ ಅದನ್ನು ನಾನು ಮತ್ತು ಪಿಡಬ್ಲ್ಯೂ-1 ರಿಂದ 3 ರವರು ಸೇರಿ ಸೃಷ್ಟಿಸಿ ದಾವಾ ಆಸ್ತಿಯನ್ನು ಕಬಳಿಸಲು ಈ ದಾವಾ ಹಾಕಿರುತ್ತೇವೆಂದರೆ ಸರಿಯಲ್ಲ. ವಾದಿಯು ನನ್ನ ಹತ್ತಿರದ ಸಂಬಂಧಿಕರಾದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ಉಖ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಒಪ್ಪಿದ್ದಾರೆ,

2ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಮಾಗಡಿ.

ದಿನಾಂಕಃ 14-06-2018 ರಂದು ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಬಿ ಆರ್ ಆರ್ ವಕೀಲರಿಂದ**

ವಾದಿ ನನ್ನ ಅಕ್ಕನ ಮಗಳಾಗಬೇಕು. 2 ನೇ ಸಾಕ್ಷಿದಾರರಾದ ವೆಂಕಟರಂಗಯ್ಯ ನನ್ನ ಯಜಮಾನರು. ವಾದಿ ಮತ್ತು ಪ್ರತಿವಾದಿಗಳು ಸಂಬಂಧಿ ಎಂದರೆ ಸರಿ. ವಾದಿಯ ಮಾವನಿಗೆ ಒಂದೇ ಒಂದು ಮನೆ ಇತ್ತು ಎಂದರೆ ಸರಿ. ಸದರಿ ಮನೆಯ ಬಿದ್ದು ಹೋಗಿರುತ್ತದೆಂದರೆ ಸರಿ. ಹೊಸ ಮನೆ ಕಟ್ಟಿರುತ್ತಾರಾ ಎಂದರೆ ಸರಿ, ಸದರಿ ಮನೆ ವಾದಿ ಗಂಡನ ಒಬ್ಬನೇ ಸಹೋದರ ಮಾತ್ರ ವಾಸವಾಗಿದ್ದರು ಎಂದರೆ ವಾದಿಯ ಅತ್ತೆ ಮಾವ ಆ ಮನೆಯಲ್ಲಿ ವಾಸವಾಗಿರುತ್ತಾರೆ. ಉಳಿದ ಮಕ್ಕಳು ಎಲ್ಲಿ ಇದ್ದಾರೆಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. **ವಾದಿಗೆ ತನ್ನ ಗಂಡನ ಕಡೆಯಿಂದ ಯಾವುದೇ ಆಸ್ತಿ ಬಂದಿರುವುದಿಲ್ಲ.**

ವಾದಿಯ ಗಂಡನ ಅಣ್ಣ ತಮ್ಮಂದಿರು ಭಾಗವಾಗಿರುತ್ತಾರಾ ಎಂದರೆ ಇಲ್ಲ ಎನ್ನುತ್ತಾರೆ. ವಾದಿಯ ಗಂಡನಿಗೆ ಅವರ ತಂದೆ ಮನೆಯಲ್ಲಿ ವಾಸಮಾಡಲು ಅವಕಾಶ ಕೊಟ್ಟಿರಲಿಲ್ಲ ಎಂದರೆ ಯಾವುದೇ ಮನೆ ಇರಲಿಲ್ಲ ಎನ್ನುತ್ತಾರೆ. ಆ ಕಾರಣದಿಂದ ವಾದಿ 1 ನೇ ಪ್ರತಿವಾದಿಯೊಂದಿಗೆ ಮನವಿ ಮಾಡಿಕೊಂಡು ದಾವಾ ಆಸ್ತಿಯಲ್ಲಿ ಸ್ವಲ್ಪ ದಿನ ಇರಲು ಅವಕಾಶ ಮಾಡಿಕೊಂಡಿರುತ್ತಾರೆಂದರೆ ಸರಿಯಲ್ಲ. ಖರೀದಿಸಿದ ನಂತರ ಜಾಗ ಕೊಟ್ಟಿರುತ್ತಾರೆ ಎನ್ನುತ್ತಾರೆ.

ದಾವಾ ಆಸ್ತಿಯ ಒಟ್ಟು ವಿಸ್ತೀರ್ಣ 40 x 60 ಎನ್ನುತ್ತಾರೆ. ಸದರಿ ಆಸ್ತಿಯಲ್ಲಿ 20 x 60 ರ ವಿಸ್ತೀರ್ಣದಲ್ಲಿ ವಾದಿಯು ವಾಸವಾಗಿರುತ್ತಾರೆ. ನನಗೆ ಓದಲು ಬರೆಯಲು

ಬರುತ್ತದೆ. ನಾನು 20 X 60 ಎಂದು ನಮೂದಿಸಿರುವ ಪತ್ರಕ್ಕೆ ಸಹಿ ಮಾಡಿರುತ್ತೇನೆ. ಸದರಿ ವಿಸ್ತೀರ್ಣದಲ್ಲಿ ಮನೆ ಮತ್ತು ಖಾಲಿ ನಿವೇಶನಗಳಿದ್ದು ಅವುಗಳ ಪ್ರತ್ಯೇಕ ವಿಸ್ತೀರ್ಣ ಗೊತ್ತಿರುವುದಿಲ್ಲ. ದಾವಾ ಆಸ್ತಿಯ ಒಟ್ಟು ವಿಸ್ತೀರ್ಣಕ್ಕಾಗಲೀ ಅಥವಾ ಕರಾರು ಪತ್ರದ ವಿಸ್ತೀರ್ಣದ ಚೆಕ್ಕುಬಂದಿಯನ್ನು ಹೇಳಲಾಗುತ್ತದೆಯಾ ಎಂದರೆ ಇಲ್ಲ ಎನ್ನುತ್ತಾರೆ. ನನಗೆ ದಾವಾ ಆಸ್ತಿಯ ಬಗ್ಗೆ ಗೊತ್ತಿಲ್ಲದ ಕಾರಣ ಚೆಕ್ಕುಬಂದಿಯನ್ನು ಹೇಳಲಾಗುತ್ತಿಲ್ಲ ಎಂದರೆ ಸರಿಯಲ್ಲ.

ದಿ:29-9-2011 ರಂದು ದಾವಾ ಆಸ್ತಿಗೆ ಸಂಬಂಧಿಸಿದಂತೆ ಕ್ರಯ ಕರಾರು ಪತ್ರವಾಗಿರುತ್ತದೆ. ನಾನು ಕರಾರಿನ ವ್ಯವಹಾರದಲ್ಲಿ ಸೇರಿರುತ್ತೇನೆ. ಸದರಿ ವ್ಯವಹಾರವೂ ಗಂಗಾಧರಯ್ಯನ ಮನೆಯಲ್ಲಿ ಆಗಿರುತ್ತದೆ. ನಿಪಿ-1 ನ್ನು ಮಾಗಡಿ ತಾಲ್ಲೂಕು ಕಚೇರಿಯಲ್ಲಿ ಬರೆದಿದ್ದು ಆ ಸಮಯದಲ್ಲಿ ಮುಂಗಡ ಹಣವನ್ನು ನೀಡಲಾಯಿತು. ಕರಾರಿನ ಮುಂಗಡ ಹಣವನ್ನು ಯಾರು ಯಾರಿಗೆ ಕೊಟ್ಟರು ಎಂದರೆ ನನ್ನ ಯಜಮಾನರು ಗಂಗಾಧರಯ್ಯನಿಗೆ ಕೊಟ್ಟಿರುತ್ತಾರೆ. ಈ ವಿಚಾರವನ್ನು ನಿಪಿ-1 ರಲ್ಲಿ ನಮೂದಾಗಿದೆಯಾ ಎಂದರೆ ನಾನು ನಿಪಿ-1 ನ್ನು ಓದಿರುವುದಿಲ್ಲ ಮತ್ತು ಅದರಲ್ಲಿ ಏನು ಬರೆದಿರುತ್ತಾರೆಂದು ಗೊತ್ತಿರುವುದಿಲ್ಲ ಎನ್ನುತ್ತಾರೆ. ಎಷ್ಟು ಮುಖಬೆಲೆಯ ಹಣವನ್ನು ಮುಂಗಡವಾಗಿ ನೀಡಲಾಗಿರುತ್ತದೆಂದರೆ 500 ಮತ್ತು 1000 ರೂ ಮುಖಬೆಲೆಯ ನೋಟುಗಳು ಎನ್ನುತ್ತಾರೆ.

ನಿಪಿ-1 ಕ್ಕೆ ಸಹಿ ನಾನು ಸಹಿ ಮಾಡುವಾಗ ನನ್ನ ಜೊತೆ ನನ್ನ ಯಜಮಾನರು ವೆಂಕಟರಂಗಯ್ಯ, ಹನುಮಂತಪ್ಪ ಮತ್ತು ಗಂಗಮ್ಮ ಇದ್ದರು. ನಿಪಿ-1 ನ್ನು ನನ್ನ ಸಮಕ್ಷಮ ಮುದ್ರಣ ಮಾಡಿರುವುದಿಲ್ಲ. ನಿಪಿ-1 ನ್ನು ಯಾರು ಮುದ್ರಣ ಮಾಡಿಸಿರುತ್ತಾರೆಂದರೆ ನಾನು

ನೋಡಿರುವುದಿಲ್ಲ ಎನ್ನುತ್ತಾರೆ. ನಾನು ನಿಪಿ-1 ಕ್ಕೆ ನನ್ನ ಯಜಮಾನರು ಸಹಿ ಮಾಡುವಾಗಲೇ ನಾನು ಸಹಿ ಮಾಡಿರುತ್ತೇನೆ. ನನ್ನ ಯಜಮಾನರು ಯಾವ ಪೆನ್ನಿನಿಂದ ಸಹಿ ಮಾಡಿರುತ್ತಾರೆಂದು ನಾನು ನೋಡಿರುವುದಿಲ್ಲ. ನನ್ನ ಯಜಮಾನರು ಸಹಿ ಮಾಡಿದ ಪೆನ್ನಿನಲ್ಲಿಯೇ ನಾನು ಸಹಿ ಮಾಡಿರುತ್ತೇನೆ. ನಿಪಿ-1 ಎ ನನ್ನ ಯಜಮಾನರ ಸಹಿ ಆಗಿದ್ದು , ನಿಪಿ-1 ಬಿ ನನ್ನ ಸಹಿ ಎಂದರೆ ಸರಿ. ಎರಡೂ ಸಹಿಗಳು ಬೇರೆ ಬೇರೆ ಶಾಹಿಯಿಂದ ಮಾಡಲಾಗಿದೆ ಎಂದರೆ ಸರಿ.

ನಿಪಿ-1 ರಲ್ಲಿ ಕಂಪ್ಯೂಟರ್ ಬರವಣಿಗೆಯನ್ನು ಹೊರತು ಪಡಿಸಿ ಬೆರಳಚ್ಚು ಅಥವಾ ಕೈ ಬರವಣಿಗೆ ಇದೆಯಾ ಎಂದರೆ ನಾನು ಆ ಬಗ್ಗೆ ನೋಡಿಲ್ಲ ಎನ್ನುತ್ತಾರೆ. 1 ನೇ ಪ್ರತಿವಾದಿ ಮತ್ತು ಅವರ ಗಂಡ ನಿಪಿ-1 ಕ್ಕೆ ಸಹಿ ಮಾಡುವುದನ್ನು ನೀವು ನೋಡಿರುತ್ತೀರಾ ಎಂದರೆ ನೋಡಿರುತ್ತೇನೆ ಎನ್ನುತ್ತಾರೆ. ಅವರು ಎಷ್ಟು ಸಹಿಗಳನ್ನು ನಿಪಿ-1 ಕ್ಕೆ ಮಾಡಿರುತ್ತಾರೆಂದು ನಾನು ನೋಡಿರುವುದಿಲ್ಲ. ಅವರು ಯಾವ ಭಾಷೆಯಲ್ಲಿ ಸಹಿ ಮಾಡಿರುತ್ತಾರೆಂದು ನಾನು ನೋಡಿಲ್ಲ ಎಂದರೆ ಸರಿ.

ನಾನು ಮೇಲೆ ಹೇಳಿದಂತೆ ಗಂಗಾಧರಯ್ಯ ಮತ್ತು ಗಂಗಮ್ಮ ಹಾಗೂ ವಾದಿಯ ನಡುವೆ ಯಾವುದೇ ರೀತಿಯ ಕ್ರಯ ಕರಾರು ಆಗಿಲ್ಲ, ನಾನು ಸಂಬಂಧವನ್ನು ದುರುಪಯೋಗ ಪಡಿಸಿಕೊಂಡು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸಬಂಧಿಕರಾದ ಕಾರಣ ವಾದಿಗೆ ಮನೆಯನ್ನು ಬಿಟ್ಟುಕೊಟ್ಟಿದ್ದು ಅದನ್ನು ದುರಪಯೋಗ ಪಡಿಸಿಕೊಂಡು ನಿಪಿ-1 ನ್ನು ನಾವುಗಳು ಸೇರಿ ಸೃಷ್ಟಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಒಪ್ಪಿದ್ದಾರೆ,

2ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಮಾಗಡಿ.

ದಿನಾಂಕಃ 14-06-2018 ರಂದು ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಬಿ ಆರ್ ಆರ್ ವಕೀಲರಿಂದ**

ನಾನು ವಾದಿ ಮತ್ತು ಪ್ರತಿವಾದಿಗಳು ವಾಸವಿರುವ ಅಂದರೆ ದಾವಾ ಸ್ವತ್ತಿನ ಕಡೆ ವಾಸವಿಲ್ಲ ಎಂದರೆ ಸರಿ ವಾದಿ ನನ್ನ ಅತ್ತಿಗೆ ಮಗಳು. ವಾದಿ ಮತ್ತು ಪ್ರತಿವಾದಿಗಳು ದೂರುದ ಸಂಬಂಧಿ ಎಂದರೆ ಹತ್ತಿರದ ಸಂಬಂಧಿಗಳು ಎನ್ನುತ್ತಾರೆ. ವಾದಿಯ ಮಾವನ ಮನೆಯ ಬಿದ್ದು ಹೋಗಿದ್ದು ಹೊಸ ಮನೆ ಕಟ್ಟಿರುತ್ತಾರಾ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ವಾದಿಗೆ ತನ್ನ ಗಂಡನ ಕಡೆಯಿಂದ ಯಾವುದೇ ಆಸ್ತಿ ಬಂದಿರುವುದಿಲ್ಲ.

ವಾದಿಯ ಗಂಡನ ಅಣ್ಣ ತಮ್ಮಂದಿರು ಭಾಗವಾಗಿರುತ್ತಾರಾ ಎಂದರೆ ಇಲ್ಲ ಎನ್ನುತ್ತಾರೆ. ವಾದಿಯ ಗಂಡನಿಗೆ ಅವರ ತಂದೆ ಮನೆಯಲ್ಲಿ ವಾಸಮಾಡಲು ಅವಕಾಶ ಕೊಟ್ಟಿರಲಿಲ್ಲ ಎಂದರೆ ಯಾವುದೇ ಮನೆ ಇರಲಿಲ್ಲ ಎನ್ನುತ್ತಾರೆ. ಆ ಕಾರಣದಿಂದ ವಾದಿ 1 ನೇ ಪ್ರತಿವಾದಿಯೊಂದಿಗೆ ಮನವಿ ಮಾಡಿಕೊಂಡು ದಾವಾ ಆಸ್ತಿಯಲ್ಲಿ ಸ್ವಲ್ಪ ದಿನ ಇರಲು ಅವಕಾಶ ಮಾಡಿಕೊಂಡಿರುತ್ತಾರೆಂದರೆ ಸರಿಯಲ್ಲ.

ವಾದಿಯು ಈ ದಾವಾವನ್ನು ಏನು ಪರಿಹಾರ ಕೋರಿ ಹಾಕಿರುತ್ತಾರೆಂದರೆ ದಾವಾ ಸ್ವತ್ತನ್ನು ನೊಂದಣಿ ಮಾಡಿಕೊಡುವಂತೆ ಹಾಕಿರುತ್ತಾರೆ. ದಾವಾ ಆಸ್ತಿಯನ್ನು ನಾನು ನೋಡಿರುತ್ತೇನೆ. ದಾವಾ ಆಸ್ತಿಯ ಖಾತಾ ಸಂಖ್ಯೆ ಎಷ್ಟು ಎಂದರೆ ಸರ್ವೆ ನಂ.177

ಎನ್ನುತ್ತಾರೆ. ಅದರ ಒಟ್ಟು ವಿಸ್ತೀರ್ಣ 40 X 60 ಎನ್ನುತ್ತಾರೆ. ಸದರಿ ಆಸ್ತಿಯಲ್ಲಿ 20 X 60 ರ ವಿಸ್ತೀರ್ಣದಲ್ಲಿ ವಾದಿಯು ವಾಸವಾಗಿರುತ್ತಾರೆ.

ದಿಃ29-9-2011 ರಂದು ದಾವಾ ಆಸ್ತಿಗೆ ಸಂಬಂಧಿಸಿದಂತೆ ಕ್ರಯಪತ್ರವಾಗಿರುತ್ತದೆ. ಸದರಿ ಕ್ರಯಪತ್ರ ನೊಂದಣಿಯಾಗಿದೆಯಾ ಎಂದರೆ ಇಲ್ಲ ಎನ್ನುತ್ತಾರೆ. ಸದರಿ ದಿನಾಂಕದಂದು ಯಾವ ಕಾರಣಕ್ಕಾಗಿ ಪತ್ರ ನೊಂದಣಿಯಾಗಿರಲಿಲ್ಲ ಎಂದರೆ ಗಂಗಾಧರಯ್ಯನ ಮಗಳು ಗರ್ಭಿಣಿಯಾಗಿದ್ದರಿಂದ ಆನಂತರ ಪತ್ರ ಬರೆದುಕೊಡುತ್ತೇನೆಂದು ಹೇಳಿರುತ್ತಾರೆ ಎನ್ನುತ್ತಾರೆ. ಈ ವಿಚಾರವನ್ನು ಸದರಿ ಪತ್ರದಲ್ಲಿ ಬರೆಯಲಾಗಿದೆಯಾ ಎಂದರೆ ಇಲ್ಲ ಎನ್ನುತ್ತಾರೆ. ಯಾವ ಕಾರಣಕ್ಕಾಗಿ ಕ್ರಯಪತ್ರ ನೊಂದಣಿಯಾಗಿಲ್ಲ ಎಂಬುದನ್ನು ಪತ್ರದಲ್ಲಿ ಬರೆಯಲಾಗಿದೆಯಾ ಎಂದರೆ ಯಾವ ಕಾರಣವನ್ನು ನಮೂದಿಸಿಲ್ಲ ಎನ್ನುತ್ತಾರೆ. ಯಾವ ಕಾರಣಕ್ಕಾಗಿ ಪತ್ರ ನೊಂದಣಿಯಾಗಿಲ್ಲ ಎಂಬುದನ್ನು ನಾನು ತಿಳಿದುಕೊಂಡಿಲ್ಲ ಎಂದರೆ ಸರಿ.

ನಿಪಿ-1 ನ್ನು ಮಾಗಡಿ ತಾಲ್ಲೂಕು ಕಚೇರಿಯ ಮುಂಭಾಗ ಕಂಪ್ಯೂಟರನಲ್ಲಿ ತಯಾರಿಸಲಾಯಿತು. ಆ ಸಮಯದಲ್ಲಿ ನಾನು, ವೆಂಕಟರಂಗಯ್ಯ, ಗಂಗಾಧರಯ್ಯ, ಹನುಮಂತಯ್ಯ ಮತ್ತು ಪದ್ಮಮ್ಮ ಇದ್ದೇವು ಎನ್ನುತ್ತಾರೆ. ಪತ್ರ ಮುದ್ರಣವಾಗಿ ಎಲ್ಲರೂ ಸಹಿ ಮಾಡುವವರೆಗೂ ನಾನು ಅಲ್ಲೇ ಇದ್ದೇನು. ನಿಪಿ-1 ರಲ್ಲಿ ಕಂಪ್ಯೂಟರ್ ಬರವಣಿಗೆಯನ್ನು ಹೊರತು ಪಡಿಸಿ ಬೆರಳಚ್ಚು ಅಥವಾ ಕೈ ಬರವಣಿಗೆ ಇದೆಯಾ ಎಂದರೆ ಇಲ್ಲ ಎನ್ನುತ್ತಾರೆ. ನನಗೆ ನಿಪಿ-1 ನ್ನು ತೋರಿಸಿ ಅದರಲ್ಲಿ '' **ಬರೆಸಿಕೊಂಡ "** ಎಂಬ ಪದವೂ ಕೈಯಿಂದ ಬರೆಯಲಾಗಿದೆ ಎಂದರೆ ಸರಿ. ಸದರಿ ಪದವನ್ನು ಯಾವ

ಸಂದರ್ಭದಲ್ಲಿ ಬರೆಯಲಾಗಿದೆ ಎಂಬ ವಿಚಾರವೂ ನನಗೆ ಗೊತ್ತಿರುವುದಿಲ್ಲ. ನಾನು ಸಹಿ ಮಾಡುವಾಗ ಸದರಿ ಪದ ನಿಪಿ-1 ರಲ್ಲಿ ನಮೂದಾಗಿರುವುದಿಲ್ಲ.

ನಿಪಿ-1 ನ್ನು ಗಂಗಾಧರಯ್ಯರವರೇ ಹೇಳಿ ಬರೆಸಿರುತ್ತಾರೆ. ವಾದಿ ಮತ್ತು 1 ನೇ ಪ್ರತಿವಾದಿಯು ಸಹ ಅಲ್ಲೇ ಹಾಜರಿದ್ದರು. ವಾದಿಯು ಈ ದಾವಾವನ್ನು ಎಷ್ಟು ಜನರ ಮೇಲೆ ಹಾಕಿರುತ್ತಾರೆ ನನಗೆ ಗೊತ್ತಿರುವುದಿಲ್ಲ ಎನ್ನುತ್ತಾರೆ. 2011 ರಲ್ಲಿ ದಾವಾ ಸ್ವತ್ತಿನ ಮೌಲ್ಯ ಎಷ್ಟು ಇತ್ತು ಎಂದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಆಗಾದರೆ ದಾವಾ ಸ್ವತ್ತಿನ ಮೌಲ್ಯವನ್ನು ಯಾರು ನಿಗಧಿ ಮಾಡಿರುತ್ತಾರೆಂದರೆ 1 ನೇ ಪ್ರತಿವಾದಿಯ ಗಂಡ ಗಂಗಾಧರಯ್ಯನೇ 1,60,000/- ಗಳನ್ನು ನಿಗಧಿ ಮಾಡಿರುತ್ತಾರೆ ಎನ್ನುತ್ತಾರೆ. ಕರಾರಿನ ಮುಂಗಡ ಹಣವನ್ನು ಯಾರು ಸಂದಾಯ ಮಾಡಿರುತ್ತಾರೆಂದರೆ ನಾನು ಮತ್ತು ವಾದಿ 1 ನೇ ಪ್ರತಿವಾದಿ ಮತ್ತು ಅವರ ಗಂಡನಿಗೆ ಕೊಟ್ಟಿರುತ್ತೇವೆ ಎನ್ನುತ್ತಾರೆ. ಈ ವಿಚಾರದ ಬಗ್ಗೆ ನಿಪಿ-1 ರಲ್ಲಿ ನಮೂದಿಸಿಲ್ಲ ಎಂದರೆ ಸರಿ. 100 ರೂ ಮುಖಬೆಲೆವುಳ್ಳ 1,00,000/- ಹಣವನ್ನು ನಾವು ಗಂಗಾಧರಯ್ಯನಿಗೆ ಕೊಟ್ಟಿರುತ್ತೇವೆ.

ಯಾವ ದಾಖಲಾತಿಯ ಆಧಾರದ ಮೇಲೆ ನಿಪಿ-1 ನ್ನು ಬರೆಯಲಾಗಿರುತ್ತದೆಂದರೆ ದಾವಾ ಸ್ವತ್ತಿನ ಮೂಲ ಕ್ರಯಪತ್ರವನ್ನು ನೋಡಿ ಬರೆಯಲಾಗಿದೆ ಎನ್ನುತ್ತಾರೆ. ನಾವು ಸಂಬಂಧಿಕರದ್ದರಿಂದ ಮೂಲ ಪತ್ರವನ್ನು ಪ್ರತಿವಾದಿಗಳಿಂದ ಪಡೆದುಕೊಂಡಿರುವುದಿಲ್ಲ ಎನ್ನುತ್ತಾರೆ. ಮೂಲ ಪತ್ರವನ್ನು ಹೊರತು ಪಡಿಸಿ ಬೇರೆ ದಾಖಲಾತಿ ತಂದಿರುವುದಿಲ್ಲ ಎನ್ನುತ್ತಾರೆ. ನಿಪಿ-1 ಕ್ಕೆ ನಾವು ಮುವರು ಸಾಕ್ಷಿದಾರರು ಒಂದೇ ಅವಧಿಯಲ್ಲಿ ಸಹಿ ಮಾಡಿರುತ್ತೇವೆ. ನಾನು ನನ್ನ ಬಳಿ ಇದ್ದ ಪೆನ್ನಿನಲ್ಲಿ ಸಹಿ ಮಾಡಿರುತ್ತೇವೆ. ಉಳಿದವರು ಯಾವ ರೀತಿ ಸಹಿ ಮಾಡಿರುತ್ತಾರೋ ನನಗೆ ಗೊತ್ತಿರುವುದಿಲ್ಲ.

1ನೇ ಪ್ರತಿವಾದಿಯ ಗಂಡ ಗಂಗಾಧರಯ್ಯ ಇಂಗ್ಲೀಷ್ ನಲ್ಲಿ ಮತ್ತು ಗಂಗಮ್ಮ ಕನ್ನಡದಲ್ಲಿ ನಿಪಿ-1 ಕ್ಕೆ ಸಹಿ ಮಾಡಿರುತ್ತಾರೆ. ನಾನು ಹೇಳಿದಂತೆ ಗಂಗಮ್ಮ ಮತ್ತು ಗಂಗಾಧರಯ್ಯ ನಿಪಿ-1 ನ್ನು ಬರೆದುಕೊಟ್ಟಿಲ್ಲ ಬದಲಾಗಿ ನಾನು ಮತ್ತು ವಾದಿ ಮತ್ತು ಇತರೇ ಸಾಕ್ಷಿದಾರರು ನಿಪಿ-1 ನ್ನು ಸೃಷ್ಟಿಸಿ ಸುಳ್ಳು ದಾವಾ ಹಾಕಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. 1ನೇ ಪ್ರತಿವಾದಿ ಹಾಗೂ ಅವರ ಗಂಡನಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡುವ ಯಾವುದೇ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ. ಸಂಬಂಧವನ್ನು ದುರುಪಯೋಗ ಪಡಿಸಿಕೊಂಡು ನಿಪಿ-1 ನ್ನು ಸೃಷ್ಟಿಸಿಕೊಂಡಿರುತ್ತೇವೆಂದರೆ ಸರಿಯಲ್ಲ. ಗಂಗಾಧರಯ್ಯ ನಿವೃತ್ತ ಸೇನಾ ಸಿಬ್ಬಂದಿ ಎಂದರೆ ಸರಿ. ವಾದಿಯು ನನ್ನ ಸಂಬಂಧಿಕರಾದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ಉಖ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಒಪ್ಪಿದ್ದಾರೆ,

2ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಮಾಗಡಿ.